# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 10-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಿಂದ ಈ ವರ್ಷ ಗೋಡಂಬಿ ತಿರುಳು ಬೇಡಿಕೆ ಪೂರೈಕೆಯಿಂದ ಹೆಚ್ಚಾಗುವ ಸಾಧ್ಯತೆ

ಉತ್ತಮ ಕಚ್ಚಾ ಗೋಡಂಬಿ ಉತ್ಪಾದನೆ ನಿರೀಕ್ಷಿಸಲಾಗಿತ್ತಾದರೂ ದೇಶೀಯವಾಗಿ ಕಚ್ಚಾ ಗೋಡಂಬಿ ಉತ್ಪಾದನಾ ಸೀಜನ್ ವಿಳಂಬಿತವಾಗಿ ಆರಂಭವಾಗಿತ್ತು. ಆರಂಭದಲ್ಲಿ ಉತ್ತಮವಿದ್ದ ಹವಾಮಾನ, ಆಮೇಲೆ ವ್ಯತರಿಕ್ತವಾಗಿ, ಹವಾಮಾನ ವೈಪರೀತ್ಯದಿಂದ ಹೂ ಬಿಟ್ಟು ಹಣ್ಣಾಗುವ ಪ್ರಕ್ರಿಯೆ ವ್ಯತ್ಯಯದಿಂದ ಉತ್ಪಾದನೆ ಇಳಿಕೆಯಾಗತೊಡಗಿತು. ಅಕಾಲಿಕ ಮಳೆ ಹಾಗೂ ಕೀಟಬಾಧೆಯಿಂದಾಗಿ, ಗೋವಾ, ಮಹಾರಾಷ್ಟ್ರ, ಒರಿಸ್ಸಾ, ತಮಿಳುನಾಡು ಮುಂತಾದೆಡೆಗಳಲ್ಲಿ ಉತ್ಪಾದನೆ ಗಣನೀಯ ಇಳಿಕೆಯಾಗುವ ಸಾಧ್ಯತೆಯಿದೆ. ಕೆಲವಡೆ 50 ಶೇಕಡಾ ಇಳಿಕೆಯಾಗಲೂಬಹುದೆನ್ನಲಾಗಿದೆ. ವಿಯೆಟ್ನಾಂ ಹಾಗೂ ಆಫ್ರಿಕಾದಲ್ಲೂ ಉತ್ಪಾದನೆ ಇಳಿಕೆಯಾದಲ್ಲಿ, ಮುಂದಿನ ದಿನಗಳಲ್ಲಿ ಉತ್ತಮ ಗುಣಮಟ್ಟದ ಕಚ್ಚಾ ಗೋಡಂಬಿ ದರ ಹೆಚ್ಚಾಗುವ ಸಾಧ್ಯತೆಯಿದೆ. ಹಾಗೂ ದೇಶೀ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಪೂರೈಕೆಗಿಂತ ಹೆಚ್ಚಿನ ಬೇಡಿಕೆ ಬರುವ ಸಾಧ್ಯತೆಯಿದೆ ಹಾಗೂ ಗೋಡಂಬಿ ತಿರುಳು ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## ಎಪ್ರಿಲ್ ತಿಂಗಳ ಮಲೇಶಿಯನ್ ಪಾಮೆಣ್ಣೆ ರಫ್ತು ಗಾತ್ರ ಇಳಿಕೆ

ಎಪ್ರಿಲ್ ತಿಂಗಳಲ್ಲಿ ಮಲೇಶಿಯನ್ ಪಾಮೆಣ್ಣೆ 17 ಶೇಕಡಾ ಇಳಿಕೆ ಹೊಂದಿ 1,103,093 ಟನ್ ಗಳಾಗಿದೆ. ಹಿಂದಿನ ತಿಂಗಳಲ್ಲಿ 1,331,400 ಟನ್‌ಗಳು ರಫ್ತಾಗಿತ್ತು. ಎಪ್ರಿಲ್ ತಿಂಗಳ ರಫ್ತು ಇಳಿಕೆಯಿಂದ ಪಾಮೆಣ್ಣೆ ಇನ್‌ವೆಂಟರಿ ದಾಸ್ತಾನು ಹೆಚ್ಚಳ ಸಾಧ್ಯತೆ ಹಾಗೂ ಸೋಯಾಬೀನ್ ಎಣ್ಣೆ ದರ ಇಳಿಕೆ ಇವುಗಳಿಂದ ಪಾಮೆಣ್ಣೆ ದರವೂ ಇಳಿಕೆಯಾಗಿದೆ. ಮಲೇಶಿಯನ್ ಪಾಮೆಣ್ಣೆ ರಫ್ತು ಕರವನ್ನು ಈಗಿನ 8 ಶೇಕಡಾದಿಂದ 4 ರಿಂದ 6 ಶೇಕಡಾಕ್ಕೆ ಅಲ್ಪಾವಧಿಗೆ ಇಳಿಕೆಮಾಡುವ ಪ್ರಸ್ತಾಪವಿದೆಯೆನ್ನಲಾಗಿದೆ. ಮುಂದಿನ ದಿನಗಳಲ್ಲಿ ಉತ್ಪಾದನೆಯೂ ಹೆಚ್ಚಳವಾದಲ್ಲಿ ಹಾಗೂ ಇಂಡೋನೇಶಿಯಾದ ರಫ್ತು ನಿರ್ಬಂಧ ತೆರವುಗೊಂಡಲ್ಲಿ ಪೂರೈಕೆ ಹೆಚ್ಚಳಗೊಂಡ ದರ ಇಳಿಕೆಯಾಗುವ ಸಾಧ್ಯತೆಯಿದೆ.

## ಅಮೇರಿಕಾದಿಂದ ಚೀನಾಕ್ಕೆ ಎಪ್ರಿಲ್ ತಿಂಗಳಲ್ಲಿ ಸೋಯಾಬೀನ್ ರಫ್ತು ಹೆಚ್ಚಳ

ಅಮೇರಿಕಾದಿಂದ ಚೀನಾಕ್ಕೆ ಎಪ್ರಿಲ್ ತಿಂಗಳಲ್ಲಿ ಸೋಯಾಬೀನ್ ರಫ್ತು ಹೆಚ್ಚಳಗೊಂಡರೂ ಹಿಂದಿನ ವರ್ಷ ಪ್ರಥಮ 4 ತಿಂಗಳ ರಫ್ತಿಗಿಂತ ಈ ವರ್ಷ ಪ್ರಥಮ 4 ತಿಂಗಳ ಅವಧಿಯ ರಫ್ತು 8 ಶೇಕಡಾ ಇಳಿಕೆಯಾಗಿದೆ. ದಕ್ಷಿಣ ಅಮೇರಿಕಾದ ಉತ್ಪಾದನಾ ಇಳಿಕೆಯಿಂದ ಜಾಗತಿಕ ಸೋಯಾಬೀನ್ ಬೇಡಿಕೆ ಪೂರೈಕೆಗಿಂತ ಹೆಚ್ಚಳವಾಗಿದ್ದು ದರವೂ ಹೆಚ್ಚಳವಾಗಿದೆ.